# ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಸಿ.ಎನ್.ಮಂಜೇಗೌಡ., ಇವರ ನಿಯಮ 330ರ ಸೂಚನೆಗೆ ಉತ್ತರ.

## ಸೂಚನೆ:

ಮೈಸೂರು ಜಿಲ್ಲೆಯಲ್ಲಿ ವಿದ್ಯಾಭ್ಯಾಸ ಮಾಡತಕ್ಕಂಥ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡಗಳಿಲ್ಲದಿರುವ ಬಗ್ಗೆ ನಿಯಮ 330ರ ಅಡಿ ಮಾನ್ಯ ಸಮಾಜ ಕಲ್ಯಾಣ ಸಚಿವರಲ್ಲಿ ಸದನದಲ್ಲಿ ಪ್ರಸ್ತಾಪಿಸಬಯಸುತ್ತೇನೆ.

## ಉತ್ತರ:

ಮೈಸೂರು ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 85 ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುತ್ತಿದ್ದು, ಕಟ್ಟಡಗಳ ವಿವರ ಈ ಕೆಳಕಂಡಂತಿದೆ.

| ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಸ್ವಂತ ಕಟ್ಟಡ | ಬಾಡಿಗೆ/ ಬಾಡಿಗೆ ರಹಿತ | ನಿರ್ಮಾಣ ಹಂತ | ನಿವೇಶನ ಲಭ್ಯತೆ | ನಿವೇಶನ ರಹಿತ |
|---|---|---|---|---|---|
| 85 | 70 | 15 | 10 | 1 | 4 |

ಮೇಲ್ಕಂಡಂತೆ ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ 15 ವಿದ್ಯಾರ್ಥಿ ನಿಲಯಗಳ ಪೈಕಿ 10 ವಿದ್ಯಾರ್ಥಿ ನಿಲಯಗಳಿಗೆ ರೂ.79.08 ಕೋಟಿಗಳ ಅಂದಾಜು ವೆಚ್ಚದಲ್ಲಿ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ. 01 ವಿದ್ಯಾರ್ಥಿ ನಿಲಯಕ್ಕೆ ನಿವೇಶನ ಲಭ್ಯವಿದ್ದು, ಅನುದಾನ ಲಭ್ಯತೆಯನ್ನು ಆಧರಿಸಿ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ. ಬಾಕಿ 04 ವಿದ್ಯಾರ್ಥಿ ನಿಲಯಗಳ ಪೈಕಿ 01 ವಿದ್ಯಾರ್ಥಿ ನಿಲಯವು 2021-22ನೇ ಸಾಲಿನಲ್ಲಿ ಹಾಗೂ 03 ವಿದ್ಯಾರ್ಥಿ ನಿಲಯಗಳು 2024-25ನೇ ಸಾಲಿನಲ್ಲಿ ಮಂಜೂರಾಗಿದ್ದು, ಸೂಕ್ತ ನಿವೇಶನಗಳನ್ನು ಪಡೆಯಬೇಕಾಗಿರುತ್ತದೆ. ನಿವೇಶನ ಪಡೆದ ನಂತರ ಅನುದಾನ ಲಭ್ಯತೆಯನ್ನು ಆಧರಿಸಿ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಕ್ರಮವಹಿಸಲಾಗುವುದು.

**ಸಕಇ 854 ಪಕವಿ 2024**

(ಡಾ: ಹೆಚ್.ಸಿ.ಮಹದೇವಪ್ಪ)
ಸಮಾಜ ಕಲ್ಯಾಣ ಸಚಿವರು